## 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

### ಸಿ.ಸಿ. ಸಂಃ 7/2023

| | | |
|---|---|---|
| ಸಾಕ್ಷಿಯ ಹೆಸರುಃ | ಶಶಿಕುಮಾರ್ | ಫ್ರಾಸಾಃಃ 2 |
| ತಂದೆ ಹೆಸರುಃ | ಕರಿಯಪ್ಪ | ಚಾಸಾಃಃ 2 |
| ವಯಸ್ಸುಃ | 30 ವರ್ಷ | ಪ್ರಮಾಣೀಕರಿಸಿದ<br>ದಿಃ 02/12/2025 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ತಮ್ಮಡಹಳ್ಳಿ ಗ್ರಾಮ,<br>ಪಿರಿಯಾಪಟ್ಟಣ ತಾ. | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ**

ನನಗೆ ಆರೋಪಿತರ ಪರಿಚಯವಿದೆ. ನನಗೆ ಚಾಸಾ–1 ರವರ ಪರಿಚಯ ಇದೆ. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ. ಆರೋಪಿತ ಯಾವತ್ತೂ ಸಹ ಚಾಸಾ–1 ರವರಿಗೆ ಜಗಳ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಅಕ್ರಮ ತಡೆಯುಂಟು ಮಾಡಿಲ್ಲ, ಅವರ ಕರ್ತವ್ಯಕ್ಕೆ ಚ್ಯುತಿ ಮಾಡಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿರುವುದಿಲ್ಲ. ನಾನು ಪೋಲೀಸರಿಗೆ ಈ ಸಂಬಂಧ ಯಾವುದೇ ಹೇಳಿಕೆ ನೀಡಿಲ್ಲ.

ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ. ಸಾಕ್ಷಿಯು ನಿಪಿ–2 ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.2(ಬಿ)** ಎಂದು ಗುರುತಿಸಲಾಯಿತು.

**(ಈ ಸಮಯದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ</u>**

ದಿಃ 19.02.2022 ರಂದು ಸಂಜೆ 6.00 ಗಂಟೆ ಸಮಯದಲ್ಲಿ ನಾನು ನಮ್ಮ ಗ್ರಾಮದ ಬಸವೇಶ್ವರ ದೇವಸ್ತಾನದ ಬಳಿ ಇದ್ದಾಗ ಆರೋಪಿತ ಚಾಸಾ-1 ರವರನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿದರು ಎಂದರೆ ಸರಿಯಲ್ಲ. ಚಾಸಾ-1 ರವರು ಊರಿನಲ್ಲಿ ಯಾರು ಮಧ್ಯವನ್ನು ಮಾರಾಟ ಮಾಡುತ್ತಿದ್ದಾರೆಂದು ಗೊತ್ತಿದ್ದರೂ ಸಹ ವಿಚಾರಣೆ ಮಾಡುತ್ತೀಯಾ ಎಂದು ಆರೋಪಿತ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿದರು ಎಂದರೆ ಸರಿಯಲ್ಲ. ಆಗ ಚಾಸಾ-1 ರವರು ಸಮವಸ್ತ್ರದಲ್ಲಿದ್ದರು ಎಂದರೆ ಸರಿಯಲ್ಲ. ಕೊಲೆ ಮಾಡುತ್ತೇನಂದು ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಈಗ ಹೇಳಿದಂತೆ ನಾನು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು **ನಿಪಿ-3** ಎಂದು ಗುರುತಿಸಲಾಯಿತು. ಈ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 20.12.2022 ರಂದು ಪೋಲೀಸರು ಸ್ಥಳಕ್ಕೆ ಬಂದು ನನ್ನ ಸಮಕ್ಷಮ ಸ್ಥಳ ಪಂಚನಾಮೆ ಮಾಡಿದರು ಎಂದರೆ ಸರಿಯಲ್ಲ. ಆಗ ಚಾಸಾ-3 ರವರು ಸಹ ಹಾಜರಿದ್ದರು ಎಂದರೆ ಸರಿಯಲ್ಲ. ಮಹಜರನ್ನು 9.00 ರಿಂದ 9.45 ರವರೆಗೆ ಬರೆದರು ಎಂದರೆ ಸರಿಯಲ್ಲ. ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದಃ</u>** ಇಲ್ಲ.

**ಮರು ವಿಚಾರಣೆಃ** ಇಲ್ಲ.

**<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>**

**<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.,**

**ಪಿರಿಯಾಪಟ್ಟಣ.**